ದಿಃ 07.03.2024 OS.No.49/2019 DW-1

ದಿಃ 07.03.2024 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ.ಕೆ.ಟಿ.ಟಿ. ವಕೀಲರಿಂದ

ನಾನು ಪೂರ್ಣ ದಾಖಲೆ ನೋಡದೆ ನನ್ನ ಸಹಿಯನ್ನು ಗುರುತಿಸಲು ಆಗುವುದಿಲ್ಲ. ಅಸಲು ದಾವಾ ಸಂಖ್ಯೆ 45/2019 ರ ನಿಪಿ.4 ರಲ್ಲಿ ಇರುವ ಸಹಿಯ ಬಗ್ಗೆ ನಾನು ಹೇಳಬೇಕಾದರೆ ಸಂಪೂರ್ಣ ದಾಖಲೆಯನ್ನು ತೋರಿಸಬೇಕು. ಅಸಲು ದಾವಾ ಸಂಖ್ಯೆ 45/2019 ರ ನಿಪಿ.1 ರಲ್ಲಿ ಇರುವ ಸಹಿಯ ಬಗ್ಗೆ ನಾನು ಹೇಳಬೇಕಾದರೆ ಸಂಪೂರ್ಣ ದಾಖಲೆಯನ್ನು ತೋರಿಸಬೇಕು. ನಾನು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಗೆ ಕರಾರು ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ ನಾನು ಬಾಡಿಗೆಗೆ ಕೊಟ್ಟಿರುತ್ತೇನೆ. ನಾನು ಪ್ರತಿವಾದಿಗೆ ದಾವಾ ಸ್ವತ್ತನ್ನು ಬಾಡಿಗೆಗೆ ನೀಡಿರುವ ಬಗ್ಗೆ ನಾನು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಅದೇ ರೀತಿ ರಶೀದಿಯನ್ನು ಹಾಜರುಪಡಿಸಿರುವುದಿಲ್ಲ ಏಕೆಂದರೆ ಅವರು ಸಂಬಂಧಿಕರು ಆಗಿರುತ್ತಾರೆ.

ಯಾವ ವರ್ಷದಿಂದ ಯಾವ ವರ್ಷದವರೆಗೆ ಬಾಡಿಗೆ ಕೊಟ್ಟಿರುತ್ತಾರೆ ಎಂದು ನಾನು ವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಪ್ರತಿವಾದಿಗೆ ಮಾರಾಟ ಮಾಡಿದ್ದರೂ ಸಹಾ ಬಾಡಿಗೆಗೆ ಕೊಟ್ಟಿರುತ್ತೇನೆ ಎಂದು ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.